# ರಿತ್ವಿಕ್‌ಗಿದು ಉತ್ಸವದ ಸಮಯ

‘ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ಮನರಂಜನೆ ನೀಡಬೇಕು’ ಎನ್ನುವ ನಟ ರಿತ್ವಿಕ್ ಮಠದ್, ಹಲವು ವರ್ಷಗಳಿಂದ ನಟನೆಯ ಬೆನ್ನು ಬಿದ್ದವರು. ಕಿರುತೆರೆಯಲ್ಲಿ ಮನೆಮಾತಾದ ಅವರೀಗ ‘ಉತ್ಸವ’ ಸಿನಿಮಾ ಮೂಲಕ ಮತ್ತೆ ಚಿತ್ರರಂಗದತ್ತ ಮುಖ ಮಾಡಿದ್ದಾರೆ.

■ ಸುಮಲತಾ ಎನ್.



‘ನಾನಿದ್ದ ರೀತಿಗೆ, ನಾನು ಹೀರೊ ಆಗುತ್ತೇನೆಂದರೆ ಯಾರೂ ನಂಬುತ್ತಿರಲಿಲ್ಲ. ಆದರೆ ಆ ನಂಬಿಕೆ, ಆಸೆ ನನ್ನೊಳಗೆ ಮಾತ್ರ ಗಟ್ಟಿಯಾಗಿತ್ತು. ಅದೇ ನನ್ನನ್ನು ಇಲ್ಲೀವರೆಗೆ ಕರೆದುಕೊಂಡು ಬಂದಿದೆ...’

‘ಗಿಣಿರಾಮ’ ಧಾರಾವಾಹಿ ಖ್ಯಾತಿಯ ನಟ ರಿತ್ವಿಕ್ ಮಠದ್ ಅವರ ಮಾತಿನಲ್ಲಿ ಸಿನಿಮಾ ಕಡೆಗಿನ ಅವರ ತುಡಿತವೂ ಪ್ರತಿಫಲಿಸುತ್ತಿತ್ತು.

ದಾವಣಗೆರೆಯ ದೊಡ್ಡಬ್ಬಿಗೆರೆಯವರಾದ ರಿತ್ವಿಕ್, ಸಿನಿಮಾ ದಾರಿಯಲ್ಲಿ ನಿಂತು ಕೆಲವು ವರ್ಷಗಳು ಕಳೆದಿವೆ. ಜೂನಿಯರ್ ಕಲಾವಿದನಾಗಿ ಸಿನಿಮಾಗಳಲ್ಲಿ ನಟಿಸಿದ ನಂತರ ಎರಡು ಸಿನಿಮಾಗಳಲ್ಲಿ ಮುಖ್ಯಪಾತ್ರದಲ್ಲಿ ಅಭಿನಯಿಸಿದರು. ಕಿರುತೆರೆಯಲ್ಲಿ ಮನೆಮಾತಾಗಿ, ಇದೀಗ ‘ಉತ್ಸವ’ ಸಿನಿಮಾ ಮೂಲಕ ಮತ್ತೆ ಚಿತ್ರರಂಗದತ್ತ ಹೊರಳಿದ್ದಾರೆ.

ರಿತ್ವಿಕ್ ಓದಿದ್ದು ಬಿ.ಎಸ್‌ಸಿ. ವಿಜ್ಞಾನಕ್ಕೂ ಸಿನಿಮಾಗೂ ಎಲ್ಲಿಯ ನಂಟು ಎಂದು ಪ್ರಶ್ನಿಸಿದರೆ ನಗುತ್ತಲೇ, ಚಿಕ್ಕಂದಿನ ಸಂಗತಿಯೊಂದನ್ನು ತೆರೆದಿಡುತ್ತಾರೆ.

‘ನಾನಾಗ ಆರನೇ ತರಗತಿ ಓದುತ್ತಿದ್ದೆ. ಟೀವಿ ನೋಡುವುದು ಬಿಟ್ಟರೆ ಥಿಯೇಟರ್‌ಗೆ ಕಾಲಿಟ್ಟಿರಲಿಲ್ಲ, ನಟನೆ ಎಂದರೇನೆಂದೇ ಗೊತ್ತಿರಲಿಲ್ಲ. ಒಮ್ಮೆ ನಮ್ಮೂರಿಗೆ ತಿರುಗಾಟದ ನಾಟಕದ ಕಂಪನಿಯೊಂದು ಬಂದಿತ್ತು. ಅದು ‘ನಿಸರ್ಗ ದೇವತೆ’ ಎಂಬ ನಾಟಕ ಪ್ರದರ್ಶಿಸಿತು. ಮೊದಲ ಬಾರಿ ನಟನೆ ಕಂಡಿದ್ದು ಅಲ್ಲಿಯೇ. ನಾಟಕದಲ್ಲಿ ನಟಿಸುತ್ತಿದ್ದ ವ್ಯಕ್ತಿಯನ್ನು ಕಣ್ಣು ಮಿಟುಕಿಸದೇ ನೋಡಿದ್ದೆ. ಒಬ್ಬನೇ ವ್ಯಕ್ತಿ ನಟಿಸಿದ್ದು, ಫೈಟ್ ಮಾಡಿದ್ದು, ನೃತ್ಯ ಮಾಡಿದ್ದು ನನಗೆ ಅಚ್ಚರಿಯ ಸಂಗತಿ. ಏನೋ ಚೆನ್ನಾಗಿದೆಯಲ್ಲ, ಹೀಗೇ ನಾನೂ ಆಗಬೇಕು ಎಂದು ಅನಿಸಿತ್ತು.